■ ಶಶಿಕುಮಾರ್ ಸಿ.

# ಹೊಸತನದತ್ತ ಓಪನ್‌ಎಐ?

ಚಾಟ್‌ಜಿಪಿಟಿ ಮೂಲಕ ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ಹೊಸ ನಾಂದಿಗೆ ಕಾರಣವಾದ 'ಓಪನ್‌ಎಐ' ಸಾಮಾಜಿಕ ಮಾಧ್ಯಮದತ್ತ ತನ್ನ ಚಿತ್ತಹರಿಸಿದಂತಿದೆ. ಟೆಕ್ ವಲಯದಲ್ಲಿ ಈ ಬಗ್ಗೆ ವದಂತಿಗಳು ಹರಡುತ್ತಿದ್ದು, ಈಚೆಗೆ 'ದಿ ವರ್ಜ್' ಸಹ ವರದಿ ಮಾಡಿದೆ.

ಓಪನ್‌ಎಐ, ಫೇಸ್‌ಬುಕ್ ಹಾಗೂ ಎಕ್ಸ್ ಮಾದರಿಯ ಸಾಮಾಜಿಕ ಮಾಧ್ಯಮದ ಪ್ಲಾಟ್‌ಫಾರ್ಮ್ ಹೊರತರಲು ಸಿದ್ಧತೆ ನಡೆಸುತ್ತಿದೆ. ಈ ಸುದ್ದಿ ತಂತ್ರಜ್ಞಾನ ವಲಯದಲ್ಲಿ ಸಂಚಲನ ಮೂಡಿಸುತ್ತಿದ್ದು, ಈ ಬಗ್ಗೆ ಇದುವರೆಗೆ ಕಂಪನಿಯು ಗುಟ್ಟು ರಟ್ಟು ಮಾಡಿಲ್ಲ. ಒಂದು ವೇಳೆ ಓಪನ್‌ಎಐ ಹೊಸ ಸಾಮಾಜಿಕ ಮಾಧ್ಯಮದ ಪ್ಲಾಟ್‌ಫಾರ್ಮ್ ಹೊರತಂದದ್ದೇ ಆದಲ್ಲಿ ಅದು ಫೇಸ್‌ಬುಕ್, ಎಕ್ಸ್ ಹಾಗೂ ಇನ್ನಿತರ ಸಾಮಾಜಿಕ ಮಾಧ್ಯಮಗಳಿಗೆ ಪ್ರಬಲ ಪೈಪೋಟಿ ನೀಡುವುದಂತೂ ಖಚಿತ.

'ದಿ ವರ್ಜ್' ವರದಿಯ ಪ್ರಕಾರ, ಓಪನ್‌ಎಐ ಸಂಸ್ಥೆ 'ಎಕ್ಸ್ ಮಾದರಿಯ ಸಾಮಾಜಿಕ ನೆಟ್‌ವರ್ಕ್' ಅಭಿವೃದ್ಧಿಪಡಿಸುತ್ತಿದ್ದು, ಆಂತರಿಕ ಮಾದರಿಯನ್ನು ಈಗಾಗಲೇ ನಿರ್ಮಿಸಲಾಗಿದೆ. ಇದು ಜಿಪಿಟಿ–4ಒ ಜೊತೆ ಸಂಯೋಜನೆಗೊಳ್ಳಲಿದೆ. ಇದು ಚಿತ್ರ ಹಾಗೂ ವಿಡಿಯೊ ಉತ್ಪಾದನೆಯ ಸಾಮರ್ಥ್ಯಗಳ ಮೇಲೆ ಕೇಂದ್ರೀಕೃತವಾಗಿದೆ ಎನ್ನಲಾಗಿದೆ.




ಓಪನ್‌ಎಐ ಸ್ವತಂತ್ರ ಅಪ್ಲಿಕೇಷನ್ ರಚಿಸುವುದೇ ಅಥವಾ ಚಾಟ್‌ಜಿಪಿಟಿಯ ಜೊತೆಗೆ ಸಾಮಾಜಿಕ ಮಾಧ್ಯಮ ಪ್ಲಾಟ್‌ಫಾರ್ಮ್ ಸಂಯೋಜಿಸುವುದೇ ಎಂಬ ಬಗ್ಗೆ ಸ್ಪಷ್ಟತೆ ಇಲ್ಲ. ಕಂಪನಿಯ ವಿಡಿಯೊ ಉತ್ಪಾದನಾ ವೇದಿಕೆಯಾದ ಸೋರಾ ಸಹ ಇದೇ ರೀತಿಯ ಫೀಡ್ ಹೊಂದಿದೆ. ಆದರೆ ಚಿತ್ರಗಳು ಮತ್ತು ವಿಡಿಯೊಗಳ ರಚನೆಕಾರರನ್ನು ಫೀಡ್‌ನಲ್ಲಿ ತೋರಿಸದ ಕಾರಣ ಅದು ಸಾಮಾಜಿಕ ಸಂವಹನದ ಅಂಶವನ್ನು ಕಳೆದುಕೊಂಡಿದೆ.

ಓಪನ್‌ಎಐನ ಸಾಮಾಜಿಕ ಅಪ್ಲಿಕೇಷನ್‌ನ ದೃಷ್ಟಿಕೋನವು ಎಐ ಸಾಮರ್ಥ್ಯಗಳನ್ನು ಸಂಯೋಜಿಸಿದ ವೇದಿಕೆಯಾಗಿ ರೂಪುಗೊಳ್ಳಬಹುದು. ಇದು ಎಕ್ಸ್, ಫೇಸ್‌ಬುಕ್ ಮತ್ತು ಇನ್‌ಸ್ಟಾಗ್ರಾಂಗಳೊಂದಿಗೆ ನೇರವಾಗಿ ಸ್ಪರ್ಧಿಸುವ ಬದಲು ಕೃತಕ ಬುದ್ಧಿಮತ್ತೆ ಏಕೀಕರಣದೊಂದಿಗೆ ವಿಶಿಷ್ಟ ಸಾಮಾಜಿಕ ಅನುಭವವನ್ನು ಕಟ್ಟಿಕೊಡುವ ಗುರಿ ಹೊಂದಿದೆ.

### ಎಐ ಆಧರಿತ ಸ್ಮಾರ್ಟ್‌ಫೋನ್?

ಓಪನ್‌ಎಐಗೆ ಸಂಬಂಧಿಸಿದಂತೆ ಹರಿದಾಡುತ್ತಿರುವ ಮತ್ತೊಂದು ಸುದ್ದಿಯೇ ಎಐ ಆಧರಿತ ಫೋನ್. ಹೌದು, ಓಪನ್‌ಎಐ ಸ್ಮಾರ್ಟ್‌ಫೋನ್ ಮಾರುಕಟ್ಟೆಗೆ ಕಾಲಿಡುವ ಸುದ್ದಿಗಳು ಬಲವಾಗಿ ಹರಿದಾಡುತ್ತಿವೆ.

ಆ್ಯಪಲ್ ಕಂಪನಿಯ ಡಿಸೈನ್ ವಿಭಾಗದ ಮಾಜಿ ಮುಖ್ಯಸ್ಥ ಜಾನಿ ಐವ್ ಮತ್ತು ಓಪನ್‌ಎಐ ಸಿಇಒ ಸ್ಯಾಮ್ ಆಲ್ಟ್‌ಮನ್ ಜೊತೆಗೂಡಿ ಸ್ಥಾಪಿಸಿದ ಐಒ ಪ್ರಾಡಕ್ಟ್ಸ್, ಓಪನ್‌ಎಐ ತನ್ನದೇ ಆದ ಸ್ಮಾರ್ಟ್‌ಫೋನ್ ತಯಾರಿಕೆ ವಿಚಾರಕ್ಕೆ ಪುಷ್ಟಿ ನೀಡುವಂತಿದೆ. ಇವರಿಬ್ಬರೂ ಜೊತೆಗೂಡಿ ಸ್ಮಾರ್ಟ್‌ಫೋನ್ ಹೊರತರುವ ನಿಟ್ಟಿನಲ್ಲಿ ಹೆಜ್ಜೆ ಇರಿಸಿದ್ದಾರೆ ಎನ್ನುತ್ತದೆ ದಿ ಇನ್ಫರ್ಮೇಷನ್‌ನ ವರದಿ.

ವರದಿ ಪ್ರಕಾರ ಕಂಪನಿಯು ಪರದೆಯಿಲ್ಲದ (ಸ್ಕ್ರೀನ್‌ಲೆಸ್) ಫೋನ್ ಪರಿಕಲ್ಪನೆ ಮತ್ತು ಇತರ ಎಐ ಚಾಲಿತ ಸಾಧನಗಳ ಮೇಲೆ ಕಾರ್ಯನಿರ್ವಹಿಸುತ್ತಿದೆ. ಇದಕ್ಕಾಗಿ ಈ ಸ್ಟಾರ್ಟ್‌ಅಪ್ ಸುಮಾರು 1 ಬಿಲಿಯನ್ ಡಾಲರ್‌ನಷ್ಟು ಹಣವನ್ನು ಸಂಗ್ರಹಿಸುವ ಹಂತದಲ್ಲಿದೆ. ಇದು ಮೊಬೈಲ್ ತಂತ್ರಜ್ಞಾನದ ಜಗತ್ತಿನಲ್ಲಿ ಹೊಸ ಅಧ್ಯಾಯ ತೆರೆಯುವ ಸಾಧ್ಯತೆ ಇದೆ. ■

## ಇನ್‌ಸ್ಟಾ ಸ್ನೇಹಿತರಿಗೆ 'ಬ್ಲೆಂಡ್' ಬೆಸುಗೆ




ಮೆಟಾ ಒಡೆತನದ ಇನ್‌ಸ್ಟಾಗ್ರಾಂ ಈಚೆಗೆ 'ಬ್ಲೆಂಡ್' ಎನ್ನುವ ಹೊಸ ಫೀಚರ್ ಪರಿಚಯಿಸಿದ್ದು, ಇದು ಇಬ್ಬರು ಸ್ನೇಹಿತರ ಆಸಕ್ತಿಯ ರೀಲ್ಸ್‌ಗಳನ್ನು ಪರಸ್ಪರರು ನೋಡುವಂತೆ ಬೆಸುಗೆ ಏರ್ಪಡಿಸುತ್ತದೆ.

ರೀಲ್‌ಗಳನ್ನು ನೋಡಲು ಮತ್ತು ತಮ್ಮ ಸ್ನೇಹಿತರೊಂದಿಗೆ ಅವುಗಳನ್ನು ಹಂಚಿಕೊಳ್ಳದೆಯೇ ನೋಡಲು ಅನುವಾಗುವಂತೆ ವಿನ್ಯಾಸ ಮಾಡಿರುವ ಈ ಬ್ಲೆಂಡ್ ಫೀಚರ್, ಬಳಸುವಾಗ ಹಿಂದಿಗಿಂತಲೂ ಹೆಚ್ಚು ಖುಷಿ ಕೊಡುತ್ತದೆ.

ಬ್ಲೆಂಡ್ ಅನ್ನೋದು ವೈಯಕ್ತಿಕ ಆಸಕ್ತಿಗಳ ಕುರಿತಾದ ರೀಲ್ಸ್‌ಗಳನ್ನು ಹಂಚಿಕೊಳ್ಳದೆಯೇ ಸ್ನೇಹಿತರೊಟ್ಟಿಗೆ ನೋಡಿ ಆನಂದಿಸಲು ಅನುವು ಮಾಡಿಕೊಡುತ್ತದೆ. ಇದಕ್ಕಾಗಿ ಬ್ಲೆಂಡ್ ಫೀಚರ್ ಆಕ್ಟಿವೇಟ್ ಮಾಡಿ, ಅದರಲ್ಲಿ ನಿಮ್ಮ ಸ್ನೇಹಿತರನ್ನು ಸೇರಿಸಬೇಕಾಗುತ್ತದೆ. ನಂತರ ಬ್ಲೆಂಡ್‌ನಲ್ಲಿರುವ ಯಾರೊಂದಿಗಾದರೂ ಸಂಪರ್ಕ ಸಾಧಿಸಿದಾಗ, ನಿಮ್ಮ ಮತ್ತು ಆ ಸ್ನೇಹಿತನ ಆಸಕ್ತಿಗಳ ಆಧಾರದ ಮೇಲೆ ಇನ್‌ಸ್ಟಾಗ್ರಾಂ ರೀಲ್‌ಗಳನ್ನು ಸ್ವಯಂಚಾಲಿತವಾಗಿ ಅವರವರ ಫೀಡ್‌ನಲ್ಲಿ ಸೂಚಿಸುತ್ತದೆ. ಅಂದರೆ ಇಬ್ಬರ ಆಸಕ್ತಿಯ ವಿಷಯಗಳ ರೀಲ್ಸ್‌ಗಳನ್ನು ಒಂದೇ ಫೀಡ್‌ನಲ್ಲಿ ತೋರಿಸಲಾಗುತ್ತದೆ.

ನೀವು ಕಾಮಿಡಿಯ ವಿಡಿಯೊಗಳನ್ನು ಇಷ್ಟಪಟ್ಟರೆ, ನಿಮ್ಮ ಸ್ನೇಹಿತ ಡಾನ್ಸ್ ರೀಲ್‌ಗಳನ್ನು ನೋಡಲು ಇಷ್ಟಪಡುತ್ತಾರೆ ಎಂದಿಟ್ಟುಕೊಳ್ಳಿ. ನಿಮ್ಮಿಬ್ಬರ ಬ್ಲೆಂಡ್ ಫೀಡ್‌ನಲ್ಲಿ ತಮಾಷೆ ಹಾಗೂ ಡಾನ್ಸ್‌ಗೆ ಸಂಬಂಧಿಸಿದ ರೀಲ್ಸ್‌ಗಳು ಕಾಣತೊಡಗುತ್ತವೆ.

### ಹೇಗೆ ಕೆಲಸ ಮಾಡುತ್ತದೆ?

ಸ್ನೇಹಿತರಿಗೆ ಬ್ಲೆಂಡ್ ಮೂಲಕ ನೀವು ಆಹ್ವಾನ ಕಳುಹಿಸಬೇಕು. ಸ್ನೇಹಿತ ನಿಮ್ಮ ಆಹ್ವಾನ ಸ್ವೀಕರಿಸಿದಾಗ, ನಿಮ್ಮಿಬ್ಬರಿಗೆ ವಿಶೇಷ ರೀಲ್ಸ್ ಫೀಡ್ ರಚಿಸಲಾಗುತ್ತದೆ. ಇದರಲ್ಲಿ, ಇಬ್ಬರ ಆಯ್ಕೆಯ ಪ್ರಕಾರ ವಿಡಿಯೊಗಳನ್ನು ಡಿಸ್‌ಪ್ಲೇ ಮಾಡಲಾಗುತ್ತದೆ. ಚಾಟ್ ಮೂಲಕ ಬ್ಲೆಂಡ್ ಫೀಡ್ ಪ್ರವೇಶಿಸಬಹುದು.

ಸ್ನೇಹಿತರೊಂದಿಗೆ ರೀಲ್‌ಗಳನ್ನು ಹಂಚಿಕೊಳ್ಳುವ ಮತ್ತು ನೋಡುವ ಹೊಸ ಅನುಭವವನ್ನು ಇದು ಕಟ್ಟಿಕೊಡುತ್ತದೆ. ಇನ್‌ಸ್ಟಾಗ್ರಾಂ ಅನುಭವವನ್ನು ಹೆಚ್ಚು ವಿಶೇಷ ಮತ್ತು ವೈಯಕ್ತಿಕಗೊಳಿಸುವ ಬ್ಲೆಂಡ್, ಒಂದೇ ರೀತಿಯ ಅಥವಾ ತಮಾಷೆಯ ರೀಲ್‌ಗಳನ್ನು ನೋಡಿದಾಗ, ಚಾಟ್‌ನಲ್ಲಿ ಪರಸ್ಪರ ಸಂಭಾಷಣೆ ಮಾಡುವ ಅವಕಾಶವನ್ನು ಕಲ್ಪಿಸುತ್ತದೆ.

### ಸ್ಟೇಟಸ್‌ನಲ್ಲಿ ಇನ್‌ಸ್ಟಾ ರೀಲ್ಸ್

ಈ ಹಿಂದೆ, ಇನ್‌ಸ್ಟಾಗ್ರಾಂ ರೀಲ್‌ಗಳು ವಾಟ್ಸ್‌ಆ್ಯಪ್ ಸ್ಟೇಟಸ್‌ನಲ್ಲಿ ಲಿಂಕ್‌ಗಳಾಗಿ ಕಾಣಿಸಿಕೊಳ್ಳುತ್ತಿದ್ದವು. ಆದರೀಗ ಅವುಗಳ ವಿಡಿಯೊ ಕೂಡ ಕಾಣಿಸಿಕೊಳ್ಳುತ್ತದೆ. ಜೊತೆಗೆ ಆಡಿಯೊ ಕೂಡ ಕಣ್ಮರೆಯಾಗುವುದಿಲ್ಲ. ಇದಕ್ಕಾಗಿ ಈ ಹಿಂದೆ ಇದ್ದ ಬಗ್‌ಗಳನ್ನು ಕ್ಲಿಯರ್ ಮಾಡಿರುವ ಮೆಟಾ, ವಾಟ್ಸ್‌ಆ್ಯಪ್ ಸ್ಟೇಟಸ್‌ನಲ್ಲಿ ಇನ್‌ಸ್ಟಾಗ್ರಾಂ ರೀಲ್‌ಗಳನ್ನು ಸುಲಭವಾಗಿ ಹಂಚಿಕೊಳ್ಳಲು ನೆರವಾಗುತ್ತಿದೆ. ■